## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

### ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.3/2020

ಅ.ಸಾ ಃ 1
ದೋಸಾ ಃ 1

ಸಾಕ್ಷಿದಾರರ ಹೆಸರು ಃ ನವೀನ ಹುಡೇದ
ತಂದೆಯ ಹೆಸರು ಃ ವೀರುಪಾಕ್ಷಪ್ಪ
ವಯಸ್ಸು ಃ 31 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ಹಿರೇಮಣಕಟ್ಟಿ.

ದಿನಾಂಕಃ**03/10/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1. ಹುಲಸೋಗಿ ಗ್ರಾಮದಲ್ಲಿ ನಮ್ಮ ತಂದೆಯ ಹೆಸರಿಗೆ ಸರ್ವೆ ನಂ-73/2 ಇದು 2 ಎಕರ 9 ಗುಂಟೆ ಮತ್ತು ನಮ್ಮೂರಲ್ಲಿ ನಮ್ಮ ತಂದೆಯ ಹೆಸರಿಗೆ ಸರ್ವೆ ನಂ-12/2 ಇದು 1 ಎಕರೆ 5 ಗುಂಟೆ ಜಮೀನು ಇರುತ್ತವೆ. ನಮ್ಮ ತಂದೆಯವರು ಅಪಘಾತದಲ್ಲಿ ದಿನಾಂಕಃ24/08/2018 ರಂದು ಮರಣ ಹೊಂದಿದ್ದ. ಸದರಿ ಜಮೀನುಗಳಿಗೆ ಖಾತೆ ಬದಲಾವಣೆ ಮಾಡಲು ನಾನು ಮತ್ತು ನನ್ನ ದೊಡ್ಡಪ್ಪ ಶಿಗ್ಗಾಂವ ತಾಲೂಕು ಪಂಚಾಯ್ತಿ ಕಛೇರಿಗೆ 4-5 ತಿಂಗಳ ನಂತರ ಅರ್ಜಿ ಕೊಟ್ಟಿದ್ದೆವು.

2. ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಆರೋಪಿ ಎನು ಕೆಲಸ ಮಾಡುತ್ತಾರೆ ಗೊತ್ತಿಲ್ಲ ಅಂತಾ ಹೇಳಿರುತ್ತಾರೆ. ಆರೋಪಿಯ ಪೋನ ನಂಬರ ಗೊತ್ತಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಅರ್ಜಿಯ ವಿಚಾರದಲ್ಲಿ ಎನು ಮಾತುಕತೆ ಆಗಿತ್ತು ಗೊತ್ತಿಲ್ಲ. ಸಾಕ್ಷಿ ದೂರಿನ ಮೇಲೆ ತನ್ನ ಸಹಿಯನ್ನು ಮತ್ತು ಅದರಲ್ಲಿ ಬರೆದಿರುವ ಹಸ್ತಾಕ್ಷರಗಳನ್ನು ಗುರುತಿಸಿರುವುದಿಲ್ಲ.

3. ಸಾಕ್ಷಿ ವಹಿಸುವಿಕೆ ಪಂಚನಾಮೆ ಮತ್ತು ಟ್ರ್ಯಾಪ ಪಂಚನಾಮೆ ಮೇಲೆ ತನ್ನ ಸಹಿಯನ್ನು ನೋಡಿ ಗುರುಸಿರುವುದಿಲ್ಲ. ಎಸಿಬಿ ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿರುವುದಿಲ್ಲ. ಎಸಿಬಿ ಪೊಲೀಸರು ನನ್ನ ಸಮಕ್ಷಮ ನನ್ನ ಮತ್ತು ಆರೋಪಿಯ ಸಂಭಾಷಣೆಯನ್ನು ಲ್ಯಾಪಟ್ಯಾಪ ಸಹಾಯದಿಂದ ಕೇಳಿಸಿಲ್ಲ. ಪೊಲೀಸರು ನನ್ನ ಸಮಕ್ಷಮ ರೂ.2000/- ಮುಖಬೆಲೆಯ 1 ನೋಟು ಮತ್ತು ರೂ.500/- ಮುಖಬೆಲೆಯ 4 ನೋಟುಗಳನ್ನು ತೋರಿಸಿ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಮಾಡಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಗುರುತಿಸಿರುವುದಿಲ್ಲ.

(ತನಿಖಾಧಿಕಾರಿ ಸೀಲು ಮಾಡಿದ ಸಿಡಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಮಾನ್ಯ ವಿಸಅ ಮತ್ತು ಆರೋಪಿ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

4. ಸಾಕ್ಷಿಗೆ ವಹಿಸುವಿಕೆ ಪಂಚನಾಮೆ ವೇಳೆಗೆ ಕೇಳಿಸಿದ ಸಾಕ್ಷಿ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ಕೇಳಿಸಿದ್ದು, ಆ ಧ್ವನಿ ಸಂಭಾಷಣೆಯನ್ನು ಗುರುತಿಸಿರುವುದಿಲ್ಲ. ಸಾಕ್ಷಿಗೆ ಟ್ರ್ಯಾಪ್ ಪಂಚನಾಮೆ ವೇಳೆಗೆ ಕೇಳಿಸಿದ ಸಾಕ್ಷಿ ಮತ್ತು ಆರೋಪಿಯ ನಡುವಿನ ಸಂಭಾಷಣೆಯನ್ನು ಕೇಳಿಸಿದ್ದು, ಆ ಧ್ವನಿ ಸಂಭಾಷಣೆಯನ್ನು ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

**<u>ಪಾಟೀ ಸವಾಲುಃ ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದಃ –</u>**

5. ದಿನಾಂಕಃ02/03/2019 ರಂದು ಎಸಿಬಿ ಪೊಲೀಸರಿಗೆ ನಾನೇ ದೂರು ಕೊಟ್ಟು ಆರೋಪಿ ನಮ್ಮ ಜಮೀನಿನ ಬಗ್ಗೆ ಖಾತೆ ಬದಲಾವಣೆ ಮಾಡಲು ಆರೋಪಿ ರೂ.6,000/- ಲಂಚ ಕೇಳಿದ್ದರು, ಅದನ್ನು ನನ್ನ ದೂರವಾಣಿ ಮೊಬೈಲನಲ್ಲಿ ಸಂಗ್ರಹ ಮಾಡಿಕೊಂಡಿದ್ದೆ, ಸದರಿ ವಿಷಯ ವನ್ನು ದೂರಿನಲ್ಲಿ ನಮೂದಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನೇ ಪೊಲೀಸರಿಗೆ ಆರೋಪಿ ಲಂಚದ ಹಣ ಬೇಡಿಕೆ ಇಟ್ಟ ಬಗ್ಗೆ ಮೊಬೈಲನಲ್ಲಿ ರೆಕಾರ್ಡ ಮಾಡಿದ ಸಂಭಾಷಣೆಯನ್ನು ಸಿಡಿಯಲ್ಲಿ ಹಾಕಿಕೊಂಡು ದೂರನ್ನು ದಿನಾಂಕಃ02/03/2019 ರಂದು ಸಂಜೆ 5-00 ಕ್ಕೆ ಕೊಟ್ಟಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

6. ದಿನಾಂಕ:05/03/2019 ರಂದು ನನ್ನನ್ನು, ಚಾಸಾ-2 ಮತ್ತು ಚಾಸಾ-3 ರವರನ್ನು ಎಸಿಬಿ ಪೊಲೀಸ ಠಾಣೆಗೆ ಕರೆಯಿಸಿ, ಅಲ್ಲಿ ದೂರಿನ ವಿಷಯ ತಿಳಿಸಿ, ಸಂಭಾಷಣೆಯ ವಿವರವನ್ನು ಕೂಡ ಲ್ಯಾಪಟ್ಯಾಪ ಮುಖಾಂತರ ಕೇಳಿಸಿದರು ಮತ್ತು ಅದರ ವಿವರವನ್ನು ವಹಿಸುವಿಕೆ ಪಂಚನಾಮೆಯಲ್ಲಿ ನಮೂದಿಸಿದರು ಎಂದು ಸೂಚಿಸುವುದು ಸರಿಯಲ್ಲ.

7. ನಾನೇ ಎಸಿಬಿ ಕಛೇರಿಯಲ್ಲಿ ರೂ.2,000/- ಮುಖಬೆಲೆಯ 1 ನೋಟು ಮತ್ತು ರೂ.500/- ಮುಖಬೆಲೆಯ 4 ನೋಟುಗಳನ್ನು ಪಂಚರ ಸಮಕ್ಷಮ ಹಾಜರುಪಡಿಸಿದ್ದು, ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಡಬ್ಬಿಯಲ್ಲಿ ಸಂಗ್ರಹಿಸಿ ಪಿನಾಫ್ತಲಿನ್ ಪೌಡರನ್ನು ನೋಟುಗಳ ಮೇಲೆ ಸಿಂಪಡಿಸಿದಾಗ ನೋಟುಗಳನ್ನು ಪಂಚರು ನನ್ನ ಜೇಬಿನಲ್ಲಿಟ್ಟು ಕೈಗಳನ್ನು ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಯಿತು, ಸದರಿ ದ್ರಾವಣವನ್ನು ಪ್ಲಾಸ್ಟಿಕ್ ಬಾಟಲನಲ್ಲಿ ಹಾಕಿ ಸೀಲು ಮಾಡಿ ಮತ್ತು ನೋಟುಗಳನ್ನು ಕೂಡ ಕವರನಲ್ಲಿ ಹಾಕಿ ಸೀಲು ಮಾಡಿ ಎಸಿಬಿ ಪೊಲೀಸರು ನಮ್ಮ ಹಾಗೂ ಪಂಚರ ಸಮಕ್ಷಮ ವಹಿಸುವಿಕೆ ಪಂಚನಾಮೆಯಲ್ಲಿ ಜಪ್ತಿಮಾಡಿ ಪಂಚನಾಮೆ ತಯಾರಿಸಿದರು, ಅದಕ್ಕೆ ಓದಿ ತಿಳಿದು ನಾನೇ ಸಹಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

8. ದಿನಾಂಕ:05/03/2019 ರಂದು ಮಧ್ಯಾಹ್ನ 1-30 ರಿಂದ ಸಂಜೆ 6-00 ಘಂಟೆ ಯವರೆಗೆ ನನ್ನನ್ನು ಮತ್ತು ಚಾಸಾ-2 ಮತ್ತು ಚಾಸಾ-3 ರವರನ್ನು ಹಿರೇಮಣಿಕಟ್ಟಿ ಗ್ರಾಮ ಪಂಚಾಯ್ತಿಗೆ ಕರೆದುಕೊಂಡು ಹೋಗಿ ಅಲ್ಲಿ ಮಧ್ಯಾಹ್ನ 1-15 ಘಂಟೆಗೆ ನಾನು ಮತ್ತು ಚಾಸಾ-2 ಆರೋಪಿಯ ಕಛೇರಿಯ ಒಳಗಡೆ ಹೋಗಿ ಲಂಚದ ಹಣ ರೂ.4,000/- ಕೊಟ್ಟು ಬಲಗೈ ತಲೆ ಮೇಲೆ ಕೈಸವರಿಸಿಕೊಳ್ಳುವ ಮೂಲಕ ಸಂಜ್ಞೆ ಮಾಡಿದೆನು ಎಂದು ಸೂಚಿಸುವುದು ಸರಿಯಲ್ಲ.

9. ನಂತರ ಎಸಿಬಿ ಪೊಲೀಸರು ನನ್ನ, ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಆರೋಪಿ ಕಡೆಯಿಂದ ರೂ.4,000/- ಲಂಚದ ಹಣವನ್ನು ಜಪ್ತಿಮಾಡಿದರು ಮತ್ತು ಆರೋಪಿಯ ಪ್ಯಾಂಟಿನ ಜೇಬಿನಿಂದ ಹಣವನ್ನು ತೆಗೆದು ಟ್ರ್ಯಾಪ್ ಪಂಚನಾಮೆಯಡಿಯಲ್ಲಿ ಜಪ್ತಿಮಾಡಿದರು ಎಂದು ಸೂಚಿಸುವುದು ಸರಿಯಲ್ಲ. ಎಸಿಬಿ ಪೊಲೀಸರು ಸ್ಥಳದಲ್ಲಿಯೇ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಆರೋಪಿಯ ಬಲಗೈಯನ್ನು ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು, ಸದರಿ ದ್ರಾವಣವನ್ನು ಜಪ್ತಿಮಾಡಿ ಸೀಲು ಮಾಡಿ ಪಂಚನಾಮೆ ಜರುಗಿಸಲಾಯಿತು ಎಂದು ಸೂಚಿಸುವುದು ಸರಿಯಲ್ಲ.

10. ಆರೋಪಿ ಕಡೆಯಿಂದ ರೂ.2,000/- ಮುಖಬೆಲೆಯ 1 ನೋಟು ಮತ್ತು ರೂ.500/- ಮುಖಬೆಲೆಯ 4 ನೋಟುಗಳನ್ನು ಟ್ರ್ಯಾಪ್ ಪಂಚನಾಮೆಯಡಿ ಜಪ್ತಿಮಾಡಿ ಖಾಕಿ ಲಕೋಟೆಯಲ್ಲಿ ಹಾಕಿ ಸೀಲು ಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ. ಆರೋಪಿ ಅಂಗ ಶೋಧನೆಯಿಂದ ಕ್ರಮ ಸಂಖ್ಯೆ 1 ರಿಂದ 6 ಮತ್ತು 9 ನ್ನು ಪರಿಶೀಲಿಸಿ ವಾಪಾಸು ಕೊಡಲಾಯಿತು ಎಂದು ಸೂಚಿಸುವುದು ಸರಿಯಲ್ಲ.

11. ಆರೋಪಿ ಮತ್ತು ನನ್ನ ನಡುವೆ ಆದ ಸಂಭಾಷಣೆಯ ವಿವರವನ್ನು ಲ್ಯಾಪಟ್ಯಾಪ ಮುಖಾಂತರ ಸಿಡಿಗೆ ವರ್ಗಾಯಿಸಿ ಜಪ್ತಿಮಾಡಲಾಯಿತು ಎಂದು ಸೂಚಿಸುವುದು ಸರಿಯಲ್ಲ. ಆರೋಪಿ ನಮ್ಮ ಸಮಕ್ಷಮ ನೋಟೀಸಿಗೆ ಉತ್ತರ ಕೂಡ ಕೊಟ್ಟಿದ್ದನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಜಪ್ತಿ ಮಾಡಲಾಯಿತುಎಂದು ಸೂಚಿಸುವುದು ಸರಿಯಲ್ಲ.

12. ದಿನಾಂಕಃ05/03/2019 ರಂದು ಮಧ್ಯಾಹ್ನ 1-30 ರಿಂದ 6-00 ಘಂಟೆಯವರೆಗೆ ಟ್ರ್ಯಾಪ್ ಪಂಚನಾಮೆಯನ್ನು ಎಸಿಬಿ ಪೊಲೀಸರು ನಮ್ಮ ಮತ್ತು ಪಂಚರ ಸಮಕ್ಷಮ ಮೇಲೆ ವಿವರಿಸಿದಂತೆ ಓದಿ ಹೇಳಿ ತಯಾರಿಸಿ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ದೂರಿನ ವಿಷಯ, ವಹಿಸುವಿಕೆ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆಗಳ ವಿಷಯ ಗೊತ್ತಿದ್ದರೂ ಈಗ ಆರೋಪಿ ಜೊತೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ಯಾರೂ ಒತ್ತಾಯ ಮತ್ತು ಭಯ ಹಾಕಿರುವುದಿಲ್ಲ. ನಾನು ಸ್ವ-ಇಚ್ಛೆಯಿಂದ ಸಾಕ್ಷಿ ನುಡಿದಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ–</u>**

ಈ ಸಾಕ್ಷಿಗೆ ಶ್ರೀ ಯು.ಎನ್.ಜಿ. ರವರು ಪಾಟೀ ಸವಾಲು ಇಲ್ಲ ಅಂತಾ ಮನವಿ ಮಾಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.